ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2024

ಉತ್ತರಿಸಬೇಕಾಗಿದ್ದ ದಿನಾಂಕ : 27.03.2020

ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ವಿರಾಜಪೇಟೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮೀಪದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣ ಕಾಮಗಾರಿಯು 9 ವರ್ಷಗಳಾದರೂ ಇನ್ನು ಪೂರ್ಣಗೊಳ್ಳದೇ ಕ್ರೀಡಾಪಟುಗಳ ಅಭ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಸದರಿ ಕಾಮಗಾರಿಗೆ ದಿನಾಂಕ:12.03.2013ರಂದು ಕಾರ್ಯದೇಶ ನೀಡಲಾಗಿರುತ್ತದೆ. ಕಾಮಗಾರಿಯ ಅನುಮೋದಿತ ಅಂದಾಜಿನ ಅನ್ವಯ (scope of work) ಪ್ರಸ್ತುತ ಪೂರ್ಣಗೊಂಡಿರುತ್ತದೆ.
ಆ)	ಬಂದಿದ್ದಲ್ಲಿ, ಸದರಿ ಕಾಮಗಾರಿ ಇಷ್ಟು ವರ್ಷಗಳಾದರೂ ಇನ್ನೂ ಪೂರ್ಣಗೊಳ್ಳದಿರಲು ಕಾರಣಗಳೇನು;	ದಿನಾಂಕ: 12.03.2013ರಂದು ರೂ. 326.65 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣದ ಕಟ್ಟಡ ನಿರ್ಮಾಣ, ಗೋಡೆಗಳಿಗೆ ಪ್ಲಾಸ್ಟರಿಂಗ್, ಎಂ.ಎಸ್. ಟ್ಯೂಬ್ಯೂಲರ್ ಟ್ರಸ್ ಅಳವಡಿಸಿ ಮೇಲ್ಚಾವಣಿಗೆ ಜಿ.ಐ. ಶೀಟ್ಸ್ ಅಳವಡಿಸುವುದು, ಕಿಟಕಿ, ಬಾಗಿಲುಗಳನ್ನು ಅಳವಡಿಸುವುದು, ಶೌಚಾಲಯಗಳ ನಿರ್ಮಾಣ, ಬಣ್ಣ ಬಳಿಯುವುದು ಹಾಗೂ ಇತರೆ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಕಾಮಗಾರಿಯ ಅನುಮೋದಿತ ಅಂದಾಜಿನ ಅನ್ವಯ (scope of work) ಪ್ರಸ್ತುತ ಪೂರ್ಣಗೊಂಡಿದ್ದು, ಕೊಡಗು ಜಿಲ್ಲೆಯಾದ್ಯಂತ ಅಕಾಲಿಕ ಮಳೆ ಉಂಟಾಗಿದ್ದರಿಂದ, ಮರಳಿನ ಅಭಾವ ಹಾಗೂ ಅನುದಾನದ ಕೊರತೆಯಿಂದಾಗಿ ಕಾಮಗಾರಿಯ ಪ್ರಗತಿಯಲ್ಲಿ ಕುಂಠಿತವಾಗಿತ್ತು. ಇಲ್ಲಿಯವರೆಗೂ 7 ಬಿಲ್ಲುಗಳಲ್ಲಿ ಒಟ್ಟು ರೂ 325.57 ಲಕ್ಷಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ. ಮುಂದುವರೆದು, ಹೆಚ್ಚುವರಿ ಕಾಮಗಾರಿಗಳಾದ ಒಳಾಂಗಣ ಕ್ರೀಡಾಂಗಣಕ್ಕೆ ಕೂಡು ರಸ್ತೆ, ಚರಂಡಿ ನಿರ್ಮಾಣ, ಇಂಟರ್ ಲಾಕ್ ಪೇವರ್ಸ್ ಅಳವಡಿಸುವುದು, ನೀರು ಸರಬರಾಜು ಮತ್ತು

		ಶೌಚಾಲಯಗಳ ನಿರ್ಮಾಣ, ತಡೆಗೋಡೆ, ಕಾಂಪೌಂಡ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಮಾಣ ಸಂಸ್ಥೆಯಾದ ಮೇ॥ ಕೆ.ಆರ್.ಐ.ಡಿ.ಎಲ್ ಇವರಿಂದ ರೂ. 91.20 ಲಕ್ಷಗಳ ಅಂದಾಜು ಪಟ್ಟಿಯನ್ನು ಪಡೆಯಲಾಗಿರುತ್ತದೆ. ಆದರೆ, ಅನುದಾನದ ಕೊರತೆಯಿಂದಾಗಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.
ಇ)	ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಹಾಗೂ ಈ ವಿಳಂಬಕ್ಕೆ ಗುತ್ತಿಗೆದಾರರು ಕಾರಣಕರ್ತರಾಗಿದ್ದರೆ ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?	ಕಾರ್ಯಾದೇಶ ನೀಡಲಾಗಿರುವ ಕಾಮಗಾರಿಗಳನ್ನು ಪ್ರಸ್ತುತ ಗುತ್ತಿಗೆದಾರರು ಪೂರ್ಣಗೊಳಿಸಿರುತ್ತಾರೆ. ನೈಸರ್ಗಿಕ ವಿಕೋಪದಿಂದ ಹಾಗೂ ಕಟ್ಟಡ ಸಾಮಗ್ರಿಗಳ ಅಭಾವದಿಂದ ಕಾಮಗಾರಿಯ ಪ್ರಗತಿಯು ಕುಂಠಿತಗೊಂಡಿತ್ತು. ಆದಾಗ್ಯೂ ಸಹ ವಿಳಂಬವಾಗಿರುವ ಅವಧಿಗೆ ನಿಯಮಾನುಸಾರ ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆ.

ವೈಎಸ್ ಡಿ - ಇಬಿಬಿ / 80 / 2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ